<u>**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**</u>

<u>**ಪಾಟೀ ಸವಾಲುಃ- ಶ್ರೀ ಬಿ ಕೆ ಎಂ ವಕೀಲರಿಂದ ವಾದಿಯ ಪರವಾಗಿ**</u>

3. ನನ್ನ ಸ್ವಂತ ಊರು ಗೊನೂರು ಇರುತ್ತದೆ. ನನ್ನ ಸ್ವಂತ ಊರು ಚಿಕ್ಕನಕೆರೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಣ್ಣ ತಮ್ಮಂದಿರು ಗೊನೂರುನಲ್ಲಿ ವಾಸಿಸುತ್ತಾರೆ. ಈ ದಾವೆಯನ್ನು ಪಾಪಮ್ಮ ಅಶೋಕ್‌ರವರ ಮೇಲೆ ಹಾಕಿರುತ್ತಾರೆ. ಪಾಪಮ್ಮ ಜಾಗಕ್ಕೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾರೆ. ಸದರಿ ಜಾಗದ ಖಾತಾ ನಂಬರ್ ಹೇಳಲು ಬರುವುದಿಲ್ಲ. ಪಾಪಮ್ಮನಿಗೆ ಸದರಿ ಜಾಗ ಹೇಗೆ ಬಂದಿರುತ್ತದೆ ಎಂದು ಗೊತ್ತಿಲ್ಲ. ಪಾಪಮ್ಮನ ಹೆಸರಿನಲ್ಲಿ ಇರುವ ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ಒಂದೇ ಜಾಗಕ್ಕೆ ಪಾಪಮ್ಮ ಮತ್ತು ಓಬಮ್ಮನಿಗೆ ಹಕ್ಕು ಪತ್ರ ನೀಡಲಾಗಿದೆ. ಪಾಪಮ್ಮ ನಿಗೆ ನೀಡಿರುವ ಹಕ್ಕು ಪತ್ರ ನೋಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ದಾವಾಸ್ವತ್ತಿನ ಹಕ್ಕು ಪತ್ರವನ್ನು ಚಿದಾನಂದಪ್ಪನಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಹುಲ್ಲು ಬನ್ನಿ ಖಾರಾಬ್ ನಲ್ಲಿ ಚಿದಾನಂದಪ್ಪನಿಗೆ ಹಕ್ಕು ಪತ್ರ ನೀಡಲಾಗಿದೆ. ಸದರಿ ಸೈಟ್ ನ ಪೂರ್ವಕ್ಕೆ - ರಸ್ತೆ , ಪಶ್ಚಿಮ್ಕೆ - ಸರ್ವೇ ನಂ. 12 , ಉತ್ತರಕ್ಕೆ ಸೈಟ್ ನಂ.11, ದಕ್ಷಿಣಕ್ಕೆ ಸೈಟ್ ನಂ. 13 ಇದೆ ಎಂದರೆ ಸರಿ. ಅದರಂತೆ ಚಿದಾನಂದಪ್ಪನ ಹೆಸರಿನಲಿಲ ಖಾತೆ ಬದಲಾವಣೆಯಾಗಿದೆ ಎಂದರೆ ಗೊತ್ತಿಲ್ಲ.

4. ಚಿದಾನಂದಪ್ಪ ತೀರಿಕೊಂಡಿರುತ್ತಾರೆ ಎಂದರೆ ಸರಿ. ಚಿದಾನಂದಪ್ಪ ತೀರಿಕೊಂಡ ಮೇಲೆ ಓಬಮ್ಮ ನ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸರಿ. ಸೈಟ್ ವಿಷಯವಾಗಿ ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಗಳಿಗೆ ಗಲಾಟೆಯಾಗಿತ್ತು ಎಂದರೆ ಸರಿ. ವಾದಿಗಳು 1 ಮತ್ತು 2 ನೇ ಪ್ರತಿವಾದಿಯವರೊಂದಿಗೆ ಆಸ್ತಿಯಲ್ಲಿ ಹಕ್ಕು ಕೇಳಿ ಗಲಾಟೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ವಿಷಯವಾಗಿ ಗೊನೂರಿನಲ್ಲಿ ಪಂಚಾಯತಿ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಪಾಪಮ್ಮ ನ ಹಕ್ಕು ಪತ್ರ ನೋಡಿರುವುದಿಲ್ಲ. ದಾವಾಸ್ವತ್ತಿನ ಲ್ಲಿ ಚಿದಾನಂದಪ್ಪ ಇದ್ದಾರೆ ಎಂದರೆ ಸರಿಯಲ್ಲ. ಇಬ್ಬರೂ ಸ್ವಾಧೀನದಲ್ಲಿ ಇದ್ದಾರೆ. ಚಿದಾನಂದಪ್ಪ ತೀರಿಕೊಂಡ ಮೇಲೆ ಆತನ ಹೆಂಡತಿ ಮಕ್ಕಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಇಬ್ಗರು ಸ್ವಾಧೀನದಲ್ಲಿ ಇರುತ್ತಾರೆ. ಇಬ್ಬರು ಎಂದರೆ ಪಾಪಮ್ಮ ಮತ್ತು ಓಬಮ್ಮ. ಇಬ್ಬರು ಅಲ್ಲಿ ತಿಪ್ಪೇ ಹಾಕಿಕೊಂಡಿರುತ್ತಾರೆ. ಈ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಗೊನೂರಿನಲ್ಲಿ ನನಗೆ ಸ್ವಂತ ಮನೆ ಇರುತ್ತದೆ. ಸ್ವಂತ ಮನೆ ಇದ್ದರೆ

ಪ್ರತಿವರ್ಷ ಗ್ರಾಮ ಪಂಚಾಯತಿ ಇಂದ ತನಿಖೆ ಮಾಡಿ ಕಂದಾಯ ಕಟ್ಟಿಸಿಕೊಳ್ಳುತ್ತಾರೆ ಎಂದರೆ ಸರಿ. ಅದೇ ರೀತಿ ಸೈಟ್‌ಗಳಿಗೂ ಕಂದಾಯ ಕಟ್ಟಿಸಿಕೊಳ್ಳುತ್ತಾರೆ ಎಂದರೆ ಸರಿ. ಪಂಚಾಯತಿಯಲ್ಲಿ ಮಾಲೀಕರನ್ನು ಬಿಟ್ಟು ಬೇರೆಯವರ ಹೆಸರಿಗೆ ಖಾತೆ ಮಾಡುವುದಿಲ್ಲ ಎಂದರೆ ಸರಿ. ಪ್ರತಿವರ್ಷ ಸ್ವಾಧೀನದ ಬಗ್ಗೆ ತನಿಖೆ ಮಾಡಲಾಗುತ್ತದೆ ಎಂದರೆ ಸರಿ. ವರದಿ ಬರೆದುಕೊಂಡು ಹೋಗಿ ಖಾತೆಯಲ್ಲಿ ನಮೂದಿಸಲಾಗುತ್ತದೆ ಎಂದರೆ ಸರಿ. ಓಬಮ್ಮ ಕಂದಾಯ ಪಾವತಿಸಿರುತ್ತಾರೆ ಎಂದರೆ ಸರಿ.

5. ನನ್ನ ಪ್ರಮಾಣ ಪತ್ರದಲ್ಲಿ ಗುಡಿಸಲು ಬಗ್ಗೆ ಬರೆಸಿರುತ್ತೇನೆ, ಅದನ್ನು ನಾನು ನೋಡಿರುವುದಿಲ್ಲ. ನಾನು ಗುಡಿಸಲನ್ನು ಖುದ್ದಾಗಿ ನೋಡಿರುವುದಿಲ್ಲ ಬೇರೆಯವರು ಹೇಳಿರುತ್ತಾರೆ. ಅದರ ಆಧಾರದ ಮೇಲೆ ನಾನು ಸಾಕ್ಷಿ ಹೇಳುತ್ತಿದ್ದೇನೆ. ಗಲಾಟೆಯ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಖಾತೆ ನಂಬರ್ ಹೇಳಲು ಬರುವುದಿಲ್ಲ. ಅದರ ಚಕ್ ಬಂದಿ ಗೊತ್ತಿರುತ್ತದೆ. ದಾವಾಸ್ವತ್ತು ವಾದಿಯವರ ತಂದೆಯ ಸ್ವತ್ತು ಎಂದರೆ ಸರಿ. ಚಿದಾನಂದಪ್ಪ ಸತ್ತ ಮೇಲೆ ವಾದಿಗಳಿಗೆ ಅದರಲ್ಲಿ ಹಕ್ಕು ಇದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರ ದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.1992 ರಲ್ಲಿ ಚನ್ನಕೇಶವನಿಗೆ ಖಾಲಿ ನಿವೇಶನದ ಹಕ್ಕು ಪತ್ರ ನೀಡಿಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಗುಡಿಸಲು ಇದ್ದು 9-10 ವರ್ಷಗಳ ಹಿಂದೆ ಬಿದ್ದು ಹೋಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ತಿಪ್ಪೇ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಿಪ್ಪೇ ಚನ್ನಕೇಶವನ ಸ್ವಾಧೀನದಲ್ಲಿ ಇದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಕೇಶವ ಗಾರೆ ಕೆಲಸ ಮಾಡುತ್ತಾರೆ.ಇವತ್ತು ಅವರು ಕೆಲಸಕ್ಕೆ ಹೋಗಿರುತ್ತಾರೆ. ಚನ್ನಕೇಶವ ಆರೋಗ್ಯವಂತನಾಗಿರುತ್ತಾನೆ ಎಂದರೆ ಸರಿಯಲ್ಲ. ಆತನಿಗೆ ಕಣ್ಣು ಕಾಣುತ್ತದೆ ಕಿವಿ ಕೇಳಿಸುತ್ತದೆ. ನಾನು ಆತನ ಸಂಬಂಧಿಕನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಆತನ ಸ್ನೆಹೀತನಾಗಿರುತ್ತೇನೆ. ನಾನು 3 ನೇ ಪ್ರತಿವಾದಿಯ ಸ್ನೆಹೀತನಾದ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ